# ಅಜಾಮಿಳನ ನಿಜ ಉಪಾಖ್ಯಾನ

ಶಶಿಕಲಾ ಶ್ರೀಧರ್

ಪುರಾಣ ಪ್ರಸಿದ್ಧ ವ್ಯಕ್ತಿಯಾದ ಅಜಾಮಿಳನ ಬಗ್ಗೆ ಹಲವಾರು ಸಂದೇಹಗಳಿವೆ – ಕೆಟ್ಟ ಜೀವನವನ್ನು ನಡೆಸಿಯೂ ಒಂದೇ ನಾಮ ಸ್ಮರಣೆಯಿಂದ ಮುಕ್ತಿ ದೊರಕುವುದೇ – ಎಂದು. ಈ ಸಂದೇಹಕ್ಕೆ ಉತ್ತರವೆಂಬಂತೆ, ಈ ಕಥೆಯನ್ನು ಸರಿಯಾಗಿ ಅರ್ಥೈಸುವ ಪ್ರಯತ್ನವನ್ನಿಲ್ಲಿ ಮಾಡಲಾಗಿದೆ. ಲೇಖಕಿ, ಬೆಂಗಳೂರು ರಾಮಕೃಷ್ಣ ಮಠದ ಭಕ್ತರು. ಅವರು ಸಂಸ್ಕೃತ, ಸಂಗೀತ ಕ್ಷೇತ್ರಗಳಲ್ಲಿ ಪರಿಣತರು.

**ಕಷ್ಟದಲ್ಲಿರಲಿ ಉತ್ಕೃಷ್ಟದಲ್ಲಿರಲಿ**
**ಎಷ್ಟಾದರೂ ಮತಿಗೆಟ್ಟಿರಲಿ**
**ಕೃಷ್ಣ ಕೃಷ್ಣ ಎಂದು ಶಿಷ್ಟರು ಪೇಳುವ**
**ಅಷ್ಟಾಕ್ಷರ ಮಹಾಮಂತ್ರದ ನಾಮವ ॥**
**ಸಂತತ ಹರಿ ನಿನ್ನ ಸಾಸಿರ ನಾಮವ**
**ಅಂತರಂಗದ ಒಳಗಿರಿಸಿ**
**ಎಂತೋ ಪುರಂದರವಿಠ್ಠಲರಾಯನ**
**ಅಂತ್ಯಕಾಲದಲ್ಲಿ ಚಿಂತಿಸೊ ಹಂಗೆ ॥**
**ನಾರಾಯಣ ನಿನ್ನ ನಾಮದ ಸ್ಮರಣೆಯ**
**ಸಾರಾಮೃತವೆನ್ನ ನಾಲಿಗೆಗೆ ಬರಲಿ ॥**

ಎಂದು ದಾಸವರೇಣ್ಯ ಪುರಂದರದಾಸರು ಹಾಡುತ್ತಾ ಮತ್ತೆ, ಜವನ ದೂತರು ಬರುವ ಹೊತ್ತ ನಾವರಿಯೆವು, ಮೃತ್ಯು ಹೆಡತಲೆಯಲ್ಲಿ ನಗುತ್ತಿರುವುದನ್ನು ನಾವರಿಯೆವು,

**ಅಂತಕನ ದೂತರಿಗೆ ಕಿಂಚಿತ್ತು ದಯವಿಲ್ಲ**
**ಚಿಂತೆಯನು ಬಿಟ್ಟು ಶ್ರೀಹರಿಯ ನೆನೆ ಮನವೆ**

ಎಂದು ಹಾಡುತ್ತಾರೆ.

ಮತ್ತೊಂದು ಕೀರ್ತನೆಯಲ್ಲಿ,


**ವಾರ್ಧಕ್ಯ ಬಾಲ್ಯ ಕೆಲವು ಕಾಲ, ವಿವೇಕವಿಲ್ಲದ**
**ಬುದ್ಧಿಮಾಂದ್ಯವು ಕೆಲವು ಕಾಲ, ಅಜ್ಞಾನದಿಂದ**
**ನಿದ್ರೆಯಿಂದಲಿ ಅತಿಲೋಲ – ಈ ಪರಿಯಿಂದಲಿ**
**ಕಾಲನ ಮನೆಯ ಸಮೀಪವಾಯಿತು ಆಯಿತು**
**ಢಂಢಣ ಢಣರೆಂದು ತಾಸು ಬಾರಿಸುತಿದೆ ಕೇಳಿ**

ಎನ್ನುತ್ತಾರೆ.

ಪುನಃ

**ಕಾಲನ ದೂತರು ಕರೆವಾಗ ನೀ**
**ಕಾಲಗೆಟ್ಟು ಕಣ್ಣು ಬಿಡುವಾಗ**
**ನಾಲಿಗೆ ಸೆಳಕೊಂಡು ಜ್ಞಾನಗೆಟ್ಟಿರುವಾಗ**
**ನೀಲವರ್ಣನ ಧ್ಯಾನ ಬರುವುದೇನಯ್ಯ**

– ಎಂದು ಕೇಳುತ್ತಾರೆ.



ಹೀಗೆ ಸಾಕಷ್ಟು ಕೀರ್ತನೆಗಳಲ್ಲಿ ಪುರಂದರದಾಸರು ಸತತ ನಾಮಸ್ಮರಣೆ ಮಾಡಿದರೆ ಮಾತ್ರ ಅದು ಅಂತ್ಯಕಾಲದಲ್ಲಿ ಒದಗುವುದು ಎಂದು ಎಚ್ಚರಿಸಿದ್ದಾರೆ.

ಈ ವಿಚಾರವಾಗಿ ಶ್ರೀಮದ್ಭಾಗವತದಲ್ಲಿ ಅತ್ಯಂತ ಪ್ರಸಿದ್ಧವಾದ ಅಜಾಮಿಳನ ಉಪಾಖ್ಯಾನವನ್ನು ಕಾಣುತ್ತೇವೆ. ಶ್ರೀ ಶುಕಮಹರ್ಷಿಗಳ ಮುಖಾರವಿಂದದಿಂದ ಕೀರ್ತಿಸಲ್ಪಟ್ಟ ಈ ಪವಿತ್ರ ವ್ಯಾಖ್ಯಾನ ನಮ್ಮಲ್ಲಿ ಭಕ್ತಿಯೋಗವನ್ನು ವೃದ್ಧಿಪಡಿಸುತ್ತದೆ:

ಕಾನ್ಯಕುಬ್ಜವೆಂಬ ದೇಶದಲ್ಲಿ ಅಜಾಮಿಳನೆಂಬ ಒಬ್ಬ ಬ್ರಾಹ್ಮಣನಿದ್ದನು. ಸದಾಚಾರಸಂಪನ್ನನಾಗಿದ್ದ ಆತನು ಕರ್ಮವಶದಿಂದ ತನ್ನ ಧರ್ಮಪತ್ನಿಯನ್ನು ತೊರೆದು ದಾಸಿಯೋರ್ವಳ ಮೋಹಪಾಶಗಳಿಗೆ ಸಿಲುಕಿ, ಸದಾಚಾರವನ್ನು ಸಂಪೂರ್ಣವಾಗಿ ತ್ಯಜಿಸಿ ಭ್ರಷ್ಟನಾಗಿದ್ದನು. ಲೂಟಿ, ಕಳ್ಳತನದ ಮೂಲಕ ದ್ರವ್ಯಸಂಪಾದನೆ ಮಾಡಿ ತನ್ನ ಕುಟುಂಬವನ್ನು ಪಾಲಿಸುತ್ತಿದ್ದನು. ಅವನಿಗೆ ಹತ್ತು ಮಂದಿ ಮಕ್ಕಳಾದರು. ಅವರಲ್ಲಿ ಅತ್ಯಂತ ಕಿರಿಯ ಮಗನ ಹೆಸರು ನಾರಾಯಣ. ಅವನ ಸ್ನೇಹಪಾಶದಲ್ಲಿ ಸಿಲುಕಿದ್ದ ಅಜಾಮಿಳ ತನ್ನ ಸಂಪೂರ್ಣ ಮನಸ್ಸನ್ನು ಅವನಲ್ಲೇ ನೆಟ್ಟು, ಅವನ ಆಟ-ಪಾಟಗಳನ್ನು, ತೊದಲು ನುಡಿಗಳನ್ನು ಕೇಳಿ ಆನಂದದಿಂದಿ

ದ್ದನು. ಈ ಎಲ್ಲ ಮಕ್ಕಳ ಲಾಲನೆ ಪಾಲನೆಯಲ್ಲಿ ದಿನಗಳುರುಳಿದುದೇ ತಿಳಿಯದಂತಾಗಿ, ತನ್ನ ಜೀವಿತದ ಬಹುಭಾಗ ಕಳೆದು, ಎಂಭತ್ತು ವರ್ಷಗಳ ವೃದ್ಧನಾದನು. ಕಡೆಗೆ ಮೃತ್ಯುವೇ ತನ್ನ ತಲೆಯಮೇಲೆ ಬಂದು ಕುಳಿತದ್ದೂ ಅವನಿಗೆ ತಿಳಿಯದೇ ಹೋಯಿತು. ಹೀಗೆ ಮೋಹಪರವಶನಾಗಿದ್ದ ಅಜಾಮಿಳನ ಅಂತಿಮ ದಿನ ಬಂದೇಬಿಟ್ಟಿತು. ಭಯಂಕರ ರೂಪದಿಂದ ಕೈಗಳಲ್ಲಿ ಪಾಶಗಳನ್ನು ಹಿಡಿದಿದ್ದ ಮೂವರು ಯಮದೂತರು ಬಂದು ಅವನ ಮುಂದೆ ನಿಂತರು. ಅವರನ್ನು ಕಾಣುತ್ತಲೇ ಭಯಭೀತನಾದ ಅಜಾಮಿಳನು ದೂರದಲ್ಲಿ ಆಡುತಿದ್ದ ತನ್ನ ಕಿರಿಮಗನನ್ನು ಕಂಡು 'ನಾರಾಯಣ' ಎಂದು ಜೋರಾಗಿ ಕೂಗಿಕೊಂಡನು. ಅವನ ಬಾಯಿಂದ 'ನಾರಾಯಣ' ಎಂಬ ನಾಮವನ್ನು ಕೇಳುತ್ತಲೇ ಮಹಾವಿಷ್ಣುವಿನ ಪಾರ್ಷದರು ಒಡನೆಯೇ ಅಲ್ಲಿ ಬಂದು ನಿಂತು ಅಜಾಮಿಳನ ಪ್ರಾಣವನ್ನು ಎಳೆದೊಯ್ಯಲು ಬಂದಿದ್ದ ಯಮದೂತರನ್ನು ತಡೆದರು. ಆಗ ಯಮದೂತರಿಗೂ ವಿಷ್ಣುದೂತರಿಗೂ ನಡೆದ ಅತ್ಯಂತ ದೀರ್ಘವಾದ ಸಂಭಾಷಣೆಗಳು ಹೀಗಿವೆ:

**ಯಮದೂತರು :** ಯಾರ ಶಾಸನಕ್ಕೆ ಎಲ್ಲಿಯೂ ಪ್ರತಿಬಂಧನವಿಲ್ಲವೋ ಅಂತಹ ಸಾಕ್ಷಿಯಾಗಿರುವಂತಹ ಯಮಧರ್ಮರಾಜನ ಕಿಂಕರರು ನಾವು. ನಮ್ಮ ಸ್ವಾಮಿಯ ಆಜ್ಞೆಯಂತೆ ಈ ಅಜಾಮಿಳನನ್ನು ಎಳೆದೊಯ್ಯಲು ಬಂದಿದ್ದೇವೆ.

**ವಿಷ್ಣುದೂತರು :** ನೀವು ನಿಜವಾಗಿಯೂ ಧರ್ಮರಾಜನ ಆಜ್ಞೆಯನ್ನು ಪಾಲಿಸುವ ದೂತರೇ ಆಗಿದ್ದರೆ ಧರ್ಮದ ಲಕ್ಷಣವನ್ನೂ ತತ್ತ್ವವನ್ನೂ ತಿಳಿಸುವವರಾಗಿ.

**ಯಮದೂತರು :** ವೇದ ಯಾವುದನ್ನು ಮಾಡು ಎಂದು ಹೇಳುತ್ತದೆಯೋ ಅದು ಧರ್ಮ. ಯಾವುದನ್ನು ನಿಷೇಧ ಮಾಡಿದೆಯೋ ಅದು ಅಧರ್ಮ. ಈ ವೇದವು ಸಾಕ್ಷಾತ್ ನಾರಾಯಣ ಸ್ವರೂಪವೇ ಆಗಿದೆ. ಅಧರ್ಮಿಗಳು ತಮ್ಮ ತಮ್ಮ ಕರ್ಮಗಳಿಗನುಸಾರ ದಂಡನೆಗೆ ಯೋಗ್ಯರಾಗುವರು. ಜನ್ಮರಹಿತನೂ ಸರ್ವಜ್ಞನೂ ಆದ ನಮ್ಮ ಪ್ರಭು ತನ್ನ ರಾಜಧಾನಿಯಾದ ಸಂಯಮಿನೀಪುರದಲ್ಲಿ ಅರ್ಥಾತ್ ಜೀವಿಗಳ ಶರೀರವೆಂಬ ಪುರದಲ್ಲಿ ಇರುತ್ತಾ ಅವುಗಳ ಭೂತ ಭವಿಷ್ಯತ್ತುಗಳನ್ನು ಅರಿಯಬಲ್ಲವನೂ, ಅವುಗಳ ಹೃದಯ ಸಾಕ್ಷಿಯೂ ಆಗಿರುವುದರಿಂದ, ಧರ್ಮವೆಂಬುದು ಎಲ್ಲಕ್ಕೂ ಸಾಕ್ಷಿಯಾಗಿರುವುದರಿಂದ ಎರಡೂ ಹೊಂದಿಕೊಳ್ಳುತ್ತದೆ. ಹೀಗೆ ಜೀವಿಯ ಹಿಂದಿನ ರೂಪವನ್ನು ಚೆನ್ನಾಗಿ ನೋಡಬಲ್ಲವನಾಗಿರುವುದರಿಂದ ಅದಕ್ಕೆ ಅನುರೂಪವಾಗಿ ಆ ಜೀವಕ್ಕೆ ಮುಂದೆ ಏನಾಗಬೇಕೆಂಬುದನ್ನು ವಿಚಾರ ಮಾಡುತ್ತಾನೆ.

ಎಲೈ ವಿಷ್ಣುದೂತರೇ, ನಿಮಗೆ ತಿಳಿದೇ ಇರುವಂತೆ ಈ ಅಜಾಮಿಳನು ದೊಡ್ಡ ಶಾಸ್ತ್ರಜ್ಞನಾಗಿದ್ದನು, ಶೀಲ, ಸದಾಚಾರ ಮತ್ತು ಸದ್ಗುಣಗಳ ನಿಧಿಯೂ ಆಗಿದ್ದನು, ಯಾರ ಗುಣಗಳಲ್ಲಿಯೂ ದೋಷವನ್ನು ಕಾಣುತ್ತಿರಲಿಲ್ಲ. ಆದರೆ ಒಮ್ಮೆ ಅರಣ್ಯದಲ್ಲಿ ನೋಡಬಾರದ ದೃಶ್ಯವೊಂದು ಅವನ ಮನಸ್ಸನ್ನು ಸಂಪೂರ್ಣವಾಗಿ ಹದಗೆಡಿಸಿ ತಾನೂ ಆ ವೇಶ್ಯೆಯ ಸಂಗ ಮಾಡಿ, ಅವಳಿಗಾಗಿ ತನ್ನ ಸರ್ವಸ್ವವನ್ನೂ ಧಾರೆ ಎರೆದು, ನೀತಿಗೆಟ್ಟು ಯಥೇಚ್ಛವಾಗಿ ನಡೆಯತೊಡಗಿದನು. ಇದರಿಂದ ಸತ್ಪುರುಷರ ಧಿಕ್ಕಾರಕ್ಕೆ ಪಾತ್ರನಾದನು.

ತನ್ನ ಪಾತಕಗಳಿಗೆ ಇಲ್ಲಿಯವರೆಗೂ ಯಾವ ಪ್ರಾಯಶ್ಚಿತ್ತವನ್ನೂ ಮಾಡಿಕೊಳ್ಳದೆ ಇರುವ ಈ ಕಡುಪಾಪಿಯನ್ನು ನಮ್ಮ ಸ್ವಾಮಿ ಯಮಧರ್ಮರಾಜನ ಬಳಿಗೆ ಕರದೊಯ್ಯುವೆವು. ಅಲ್ಲಿ ಈತನು ತನ್ನ ಪಾಪಗಳಿಗೆ ದಂಡನೆಯನ್ನು ಅನುಭವಿಸಿ ಶುದ್ಧನಾಗುವನು.

**ವಿಷ್ಣುದೂತರು :** ಎಲೈ ಯಮದೂತರೇ, ಈ ಅಜಾಮಿಳನು ತಾನು ಅನೇಕ ಜನ್ಮಗಳಲ್ಲಿ ಮಾಡಿದ ಎಲ್ಲ ಪಾಪಗಳಿಗೂ ನಾರಾಯಣನ ನಾಮದ ಉಚ್ಚಾರಣೆಯಿಂದ ಪ್ರಾಯಶ್ಚಿತ್ತ ಮಾಡಿಕೊಂಡುಬಿಟ್ಟಿದ್ದಾನೆ. ಎಂತಹ ಘೋರ ಪಾಪವಾಗಿದ್ದರೂ, ಅಕ್ಷಮ್ಯ ಅಪರಾಧಗಳೇ ಆಗಿದ್ದರೂ ಪವಿತ್ರವಾದ ನಾರಾಯಣ ನಾಮಸ್ಮರಣದಿಂದ ಪ್ರಾಯಶ್ಚಿತ್ತವಾಗಿ ಬಿಡುವುದು. ಈ ಭಗವಂತನ ನಾಮಗಳಿಗೆ ಪಾಪಗಳನ್ನು ನಾಶಮಾಡುವ ಶಕ್ತಿ ಎಷ್ಟು ಇದೆಯೆಂದರೆ ಅಷ್ಟು ಪಾಪಗಳನ್ನು ಯಾವ ಪಾತಕಿಯೂ ಮಾಡಲಾರನು. ಅದು ಹೇಗೆಂದರೆ ಭಗವಂತನ ನಾಮವನ್ನು ಉಚ್ಚರಿಸಿದರೆ ಭಗವಂತನು ಮನಸ್ಸಿಗೆ ವಿಷಯವಾಗುವನು. ಪರಮಾತ್ಮನನ್ನು ಉದ್ದೇಶವಾಗಿಟ್ಟುಕೊಳ್ಳದೆಯೇ ಪರಿಹಾಸ್ಯಕ್ಕಾಗಲೀ, ರಾಗಾಲಾಪನೆ ಮಾಡುವಾಗಲಾಗಲೀ, ಅಣಕಿಸುವುದಕ್ಕಾಗಲೀ, ಕಾಲುಜಾರಿ ಬಿದ್ದ ಸಮಯದಲ್ಲಾಗಲೀ, ಆಲಸ್ಯದಿಂದ ಮೈಮುರಿಯುವಾಗಲಾಗಲೀ ಯಾರಾದರೂ ತನ್ನ ಇಚ್ಛೆ ಪ್ರಯತ್ನಗಳಿಲ್ಲದೆಯೇ 'ಹರಿ' ಎಂದು ಉಚ್ಚರಿಸಿದರೂ ಸಾಕು ಅವನು ಯಮನ ಯಾತನೆಗೆ ಪಾತ್ರನಾಗುವುದಿಲ್ಲ. ಮಹಾಶಕ್ತಿಯಿಂದ ಕೂಡಿದ ಅಮೃತವನ್ನು ಅರಿಯದೇ ಸೇವಿಸಿದರೂ, ಸೇವಿಸಿದವನನ್ನು ಅದು ಅಮರನನ್ನಾಗಿಸುವುದಲ್ಲವೆ? ಹಾಗೆಯೇ ಭಗವನ್ನಾಮದ ಶಕ್ತಿಯು ತನ್ನ ಕೆಲಸವನ್ನು ಮಾಡಿಯೇ ಮಾಡುತ್ತದೆ.

ಹೀಗೆ ವಿಷ್ಣುದೂತರು ಭಗವನ್ನಾಮದ ಮಹಿಮೆಯನ್ನೂ, ಭಾಗವತ ಧರ್ಮವನ್ನೂ ನಾನಾ ಪ್ರಕಾರವಾಗಿ ನಿರೂಪಿಸಿ ಅಜಾಮಿಳನನ್ನು ಯಮಪಾಶದಿಂದ ಬಿಡಿಸಿದರು. ಇವುಗಳನ್ನೆಲ್ಲಾ ಕೇಳಿದ ಅಜಾಮಿಳನಿಗೆ ತಾನು ಗೈದ ಘೋರಪಾಪಗಳ ಅರಿವಾಗಿ ಬಹಳವಾಗಿ ಪಶ್ಚಾತ್ತಾಪವಾಯಿತು. ಸಾಧ್ವಿಯಾದ ಪತ್ನಿ ಹಾಗೂ ತಪಸ್ವಿಗಳೂ ವೃದ್ಧರೂ ಆಗಿದ್ದ ಮಾತಾಪಿತೃಗಳೊಡನೆ ತಿರಸ್ಕಾರದಿಂದ ನಡೆದುಕೊಂಡದ್ದು ಅವನಿಗೆ ಅತೀವ ದುಃಖವನ್ನುಂಟುಮಾಡಿತು. ಅನಂತರ ಅವನು ತನ್ನ ಕರ್ತವ್ಯಗಳನ್ನು ನಿರ್ವಹಿಸಿ, ಭಕ್ತಿ ಶ್ರದ್ಧೆಗಳಿಂದ ಯೋಗಸಮಾಧಿಯನ್ನು

ಪಡೆದು ಗಂಗಾದ್ವಾರದಲ್ಲಿ ಮುಕ್ತಿಯನ್ನು ಹೊಂದಿದನು. ಅಜಾಮಿಳನು ಹಿಂದೆ ಸದಾಚಾರಸಂಪನ್ನನಾಗಿದ್ದ ಭಕ್ತನೇ ಆಗಿದ್ದುದರಿಂದ ನಾರಾಯಣ ಎಂಬ ನಾಮ ಅವನಲ್ಲಿ ಅದ್ಭುತವಾದ ಪರಿಣಾಮವನ್ನು ಬೀರಿ, ಅವನು ಮಗನ ನಾಮವನ್ನೇ ಕರೆದರೂ ಅವನನ್ನು ನಿಜವಾದ ನಾರಾಯಣನ ಸ್ಥಾನಕ್ಕೆ ಕರೆದೊಯ್ದಿತ್ತು.

**ವರ್ತಮಾನಂ ಚ ಯತ್ಪಾಪಂ ಯದ್ಭೂತಂ ಯದ್ಭವಿಷ್ಯತಿ ।**
**ತತ್ಸರ್ವಂ ನಿರ್ದಹತ್ಯಾಶು ಗೋವಿಂದಾಮಲ ಕೀರ್ತನಮ್ ॥**

*(ಶ್ರೀಮದ್ಭಾಗವತ, ಸಂಪುಟ ೪, ಪು. ೧೨೭೩, ಭಾರತ ದರ್ಶನ ಪ್ರಕಾಶನ)*

ಎಂದರೆ, ಭಗವನ್ನಾಮವನ್ನು ಉಚ್ಚರಿಸುವುದರಿಂದ ಭೂತ-ವರ್ತಮಾನ-ಭವಿಷ್ಯಗಳೆಂಬ ಮೂರು ಕಾಲಗಳ ಎಲ್ಲ ಪಾಪಗಳೂ ತೊಳೆದು ಹೋಗುವುವು.

ಈ ಅಜಾಮಿಳನ ಉಪಾಖ್ಯಾನದ ಸರಿಯಾದ ವಿವರಣೆಯನ್ನು ಅಷ್ಟಾಂಗ ಯೋಗ ವಿಜ್ಞಾನ ಮಂದಿರದ ಶ್ರೀ ಶ್ರೀ ರಂಗಪ್ರಿಯ ಸ್ವಾಮಿಗಳು ಹೀಗೆ ಹೇಳುತ್ತಾರೆ : ''ಅಜಾಮಿಳನಿಗೆ ತನ್ನ ಪುತ್ರನನ್ನು ಉದ್ದೇಶಿಸಿ ನಾರಾಯಣ ಎಂದು ಹೇಳಿದ್ದರಿಂದಲೇ ಆತನಿಗೆ ವೈಕುಂಠ ಪ್ರಾಪ್ತಿಯಾಯಿತು ಎಂದು ಭಾಗವತದಲ್ಲಿ ಹೇಳಿಲ್ಲ. ನಾಮೋಚ್ಚಾರಣೆಯಿಂದ ಅವನ ಪಾಪ ಪರಿಹಾರವಾಯಿತು. ಅನಂತರ ಆತನು ತನ್ನ ಪಾಪಗಳಿಗಾಗಿ ಪಶ್ಚಾತ್ತಾಪಗೊಂಡು, ಭಕ್ತಿಶ್ರದ್ಧೆಗಳಿಂದ ಪುನಃ ತನ್ನ ಸಾಧನೆಯನ್ನು ಮುಂದುವರಿಸುತ್ತಾನೆ. ಅಜಾಮಿಳನು ಹಿಂದೆ ಸದಾಚಾರಸಂಪನ್ನನಾದ ಭಕ್ತನೇ ಆಗಿದ್ದನು. ಪ್ರಾರಬ್ಧಕರ್ಮವಶದಿಂದ ದುರ್ಮಾರ್ಗಕ್ಕೆ ಇಳಿದು ಭ್ರಷ್ಟನಾದನು. ಆತನು ಅಂತ್ಯಕಾಲದಲ್ಲಿ ಯಾವುದೋ ಕಾರಣದಿಂದ ನಾರಾಯಣ ನಾಮವನ್ನು ಉಚ್ಚರಿಸಿದರೂ ಅದು ಆತನಿಗೇ ತಿಳಿಯದಂತೆ ನಿಜವಾದ ನಾರಾಯಣನ ಸ್ಥಾನವನ್ನೇ ಸೇರಿ ಅದಕ್ಕೆ ತಕ್ಕ ಪ್ರತಿಕ್ರಿಯೆಯನ್ನು ಉಂಟುಮಾಡಿತು.''

ಅಜಾಮಿಳನಿಗೆ ಪಶ್ಚಾತ್ತಾಪದಿಂದ ಚಿತ್ತಶುದ್ಧಿಯಾಯಿತು. ಬಿಟ್ಟುಹೋಗಿದ್ದ ಸಾಧನೆಯನ್ನು ಪುನಃ ಮುಂದುವರಿಸಲು ಸಾಧ್ಯವಾಗಿ ಅವನ ಮೋಕ್ಷಕ್ಕೆ ದಾರಿಯಾಯಿತು.

ಹೀಗೆ ಭಗವನ್ನಾಮಸ್ಮರಣೆಯ ಮಹಿಮೆ ಅಪಾರ. ಅಂತ್ಯಕಾಲದಲ್ಲಿ ಅವನ ಚಿಂತನೆ ಬರಬೇಕಾದರೆ ಜೀವಿತಾವಧಿಯ ಪೂರ್ತಿ ಅವನ ಸ್ಮರಣೆಯಲ್ಲಿದ್ದರೆ ಮಾತ್ರ ಸಾಧ್ಯವಾಗುವುದು.

ಕುಲಶೇಖರ ಆಳ್ವಾರರು ತಮ್ಮ ಮುಕುಂದಮಾಲಾ ಸ್ತೋತ್ರದಲ್ಲಿ, 'ನನ್ನ ವಸತಿಯು ಸ್ವರ್ಗದಲ್ಲಿಯೋ, ಭೂಮಿಯಲ್ಲಿಯೋ, ನರಕದಲ್ಲಿಯೋ ನಿನ್ನ ಇಷ್ಟಬಂದಂತೆ ಆಗಲಿ. ಆದರೆ ಶರತ್ಕಾಲದ ಕಮಲದ ಕಾಂತಿಯನ್ನು ಮೀರಿದ ನಿನ್ನ ಚರಣಕಮಲಗಳನ್ನು ಮರಣಕಾಲದಲ್ಲಿಯೂ ಕೂಡ ಚಿಂತಿಸಲು ಇಚ್ಛಿಸುತ್ತೇನೆ' ಎಂದು ಪ್ರಾರ್ಥಿಸುತ್ತಾರೆ. ಪುನಃ,

**ಕೃಷ್ಣ ತ್ವದೀಯ ಪದಪಂಕಜ ಪಂಜರಾಂತಮ್**
**ಅದ್ಯೈವ ಮೇ ವಿಶತು ಮಾನಸ ರಾಜಹಂಸಃ ।**
**ಪ್ರಾಣಪ್ರಯಾಣಸಮಯೇ ಕಫವಾತಪಿತ್ತೈಃ**
**ಕಂಠಾವರೋಧನವಿಧೌ ಸ್ಮರಣಂ ಕುತಸ್ತೇ ॥**

'ಹೇ ಕೃಷ್ಣ, ನನ್ನ ಮನಸ್ಸೆಂಬ ರಾಜಹಂಸವು ನಿನ್ನ ಪಾದಕಮಲಗಳೆಂಬ ಪಂಜರದಲ್ಲಿ ಈಗಲೇ ಸೇರಿಕೊಳ್ಳಲಿ. ಏಕೆಂದರೆ ಪ್ರಾಣೋತ್ಕ್ರಮಣ ಕಾಲದಲ್ಲಿ ಕಫವಾತಪಿತ್ತಗಳಿಂದ ಕಂಠವು ಕಟ್ಟಿರುವಾಗ ನಿನ್ನ ಸ್ಮರಣೆ ಹೇಗೆ ತಾನೇ ಬಂದೀತು ?'

– ಎಂದು ಕಳಕಳಿಯಿಂದ ಪ್ರಾರ್ಥಿಸುತ್ತಾರೆ.

ಆದ್ದರಿಂದ ನಮ್ಮೆಲ್ಲರ ಅಂತ್ಯಕಾಲದಲ್ಲಿ ಆ ದೇವದೇವನ ಸ್ಮರಣೆ ಬರಬೇಕಾದರೆ ನಾವು ನಮ್ಮ ಬಾಳಿನುದ್ದಕ್ಕೂ ಅವನನ್ನು ಸ್ಮರಿಸುತ್ತಲೇ ಹೋಗಬೇಕಾಗಿದೆ.

ಯಾರ ನಾಲಿಗೆಯು ಶ್ರೀ ಭಗವಂತನ ದಿವ್ಯವಾದ ಗುಣಗಳನ್ನು ಮತ್ತು ನಾಮಗಳನ್ನು ಉಚ್ಚರಿಸುವುದಿಲ್ಲವೋ, ಯಾರ ಚಿತ್ತವು ಶ್ರೀ ಭಗವಂತನ ಅಡಿದಾವರೆಗಳ ಚಿಂತನೆ ಮಾಡುವುದಿಲ್ಲವೋ ಮತ್ತು ಯಾರ ಶಿರವು ಆ ಕೃಷ್ಣಪರಮಾತ್ಮನ ಪಾದಾರವಿಂದಗಳಿಗೆ ನಮಸ್ಕಾರ ಮಾಡುವುದಿಲ್ಲವೋ ಅಂತಹ ಭಗವತ್ಸೇವೆಗೆ ವಿಮುಖರಾದ ಪಾಪಿಗಳನ್ನು ಮಾತ್ರ ಇಲ್ಲಿಗೆ ಕರೆತನ್ನಿರಿ ಎಂಬುದಾಗಿ ಯಮಧರ್ಮರಾಜನು ತನ್ನ ಕಿಂಕರರಿಗೆ ಹೇಳಿದ ಎಚ್ಚರಿಕೆಯ ಈ ಮಾತುಗಳನ್ನು ಗಂಭೀರವಾಗಿ ಪರಿಗಣಿಸಿ ನಾವು ನರಕದ ಹಾದಿಯನ್ನು ಹಿಡಿಯದ್ತ, ಭಗವಂತನ ಪಾದಗಳನ್ನು ಸೇರುವ ದಾರಿಯಲ್ಲಿ ಸಾಗುತ್ತಾ,

**ಅನಾಯಾಸೇನ ಮರಣಂ ವಿನಾ ದೈನ್ಯೇನ ಜೀವನಮ್ ।**
**ಅಂತ್ಯೇ ತ್ವತ್ಪದಸಾನ್ನಿಧ್ಯಂ ದೇಹಿ ಮೇ ಕರುಣಾಕರ ॥**

– ಎಂಬುದಾಗಿ ಪ್ರಾರ್ಥಿಸೋಣ.

ಒಂದು ಸಲ ಶಿಷ್ಯೆಯೊಬ್ಬಳು ಸ್ವಾಮಿ ಯತೀಶ್ವರಾನಂದರನ್ನು ಕೇಳಿದಳು : ''ಮಂತ್ರದೀಕ್ಷೆ ಎಂದರೇನು?'' ಸ್ವಾಮೀಜಿ ಉತ್ತರಿಸಿದರು: ''ನಿನಗೆ ದೀಕ್ಷೆಯಾದಾಗ ತಿಳಿಯುವುದು.'' ಕೆಲವು ದಿನಗಳ ನಂತರ ಶಿಷ್ಯೆ ಪೂಜ್ಯ ಸ್ವಾಮೀಜಿಯವರಿಂದ ದೀಕ್ಷೆ ಪಡೆದಳು. ಸ್ವಾಮೀಜಿ ಈಗ ಕೇಳಿದರು: ''ದೀಕ್ಷೆ ಎಂದರೇನೆಂದು ಈಗ ನಿನಗೆ ತಿಳಿಯಿತಲ್ಲವೆ?'' ಆಕೆ ಉತರಿಸಿದಳು: ''ಹೌದು ಸ್ವಾಮೀಜಿ, ಯಾವಾಗ ಶಿಷ್ಯಂದಿರು ಗುರುವನ್ನು ಸ್ವೀಕರಿಸುವರೋ ಆಗಲೇ ದೀಕ್ಷೆ.'' ಸ್ವಾಮೀಜಿ ನಸುನಕ್ಕು ತಿದ್ದಿದರು, ''ಹೌದು, ನಿಜ. ಯಾವಾಗ ಗುರು ಶಿಷ್ಯಂದಿರನ್ನು ಸ್ವೀಕರಿಸುವರೋ ಆಗ.'' *(Swami Yatishwarananda As We Knew Him, Vol.1, p.540)*